ಔಷಧಿ ತಗೊಂಡ್ರೂ ಇಪ್ಪತ್ತು ದಿನ ಹೋಗಲ್ವಂತೆ. ಪಥ್ಯ ಬೇರೆ ಇರ್ಬೇಕಂತೆ. ಶೆಟ್ರು ನಾಗಣ್ಣನತಾಕೆ ಹೋಗಿ ಅದೇನ್ ಪಥ್ಯ ಅಂತ ಕೇಳ್ಕಂಡ್ ಬಾ...' ಎಂದು ಮುನ್ನೂರು ರೂಪಾಯಿಯನ್ನು ಅನುಸೂಯಮ್ಮನ ಕೈಗೆ ಇಟ್ಟು ಮನೆ ಮುಂದೆ ನಿಂತಿದ್ದ ಕಾರನ್ನು ಹತ್ತಿಬಿಟ್ಟ.

ರಾತ್ರಿ ಊಟ ಮಾಡಿ ಮಲಗಿದ ಕರಿಯನುಮಪ್ಪನಿಗೆ ಎಷ್ಟೊತ್ತಾದರೂ ನಿದ್ದೆ ಬರಲಿಲ್ಲ. ಜೋಪಡಿಯ ಜಗುಲಿಯ ಮೇಲೆ ಮಲಗಿಕೊಂಡೇ ಮೈ ಪರಚಿಕೊಳ್ಳಲಾರಂಭಿಸಿದ. ಮಧ್ಯ ರಾತ್ರಿಯನ್ನು ಮೀರಿತ್ತು. ಮಿಂಚುವುದರೊಂದಿಗೆ ಗುಡುಗು ಸದ್ದು ಕೇಳಿತ್ತು. ಅದರ ಹಿಂದೆಯೇ ದಪ್ಪ ದಪ್ಪ ಹನಿಗಳು ಬೀಳತೊಡಗಿದ್ದವು. ಕರಿಯನುಮಪ್ಪ ಎದ್ದು ಕುಳಿತ. ಮಳೆ ಜೋರಾಯಿತು. ಮಿಂಚಿನ ಬೆಳಕಲ್ಲಿ ರಸ್ತೆಯಲ್ಲಿ ಮೈತುಂಬಿ ಹರಿಯುತ್ತಿದ್ದ ನೀರು ಕರಿಯನುಮಪ್ಪನ ಕಣ್ಣಿಗೆ ಬಿದ್ದು ವರ್ಣಿಸಲಾಗದ ಸಂತೋಷ ಉಂಟು ಮಾಡಿತ್ತು. ಉರಿಯುತ್ತಿದ್ದ ಶರೀರವನ್ನು ಮಳೆಗೆ ಒಡ್ಡಿ, ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಸ್ನಾನ ಮಾಡಿ ಕಜ್ಜಿಯನ್ನು ಸಂಪೂರ್ಣವಾಗಿ ಶರೀರದಿಂದ ಒದ್ದೋಡಿಸಬೇಕೆಂದು ನಿರ್ಧರಿಸಿದ ಕರಿಯನುಮಪ್ಪ ಎದ್ದು ನಿಧಾನವಾಗಿ ನಡೆಯತೊಡಗಿದ್ದ. ಮಳೆ ಮತ್ತಷ್ಟು ಜಾಸ್ತಿಯಾಗಿತ್ತು. ಕರಿಯನುಮಪ್ಪ ರಸ್ತೆಯಲ್ಲಿ ನಿಂತು ಮಳೆಯಲ್ಲಿ ಕುಣಿಯ ತೊಡಗಿದ. ರಸ್ತೆಯ ನೀರಿನಲ್ಲಿ ಶರೀರವನ್ನು ಇಷ್ಟಬಂದಂತೆ ಉರುಳಾಡಿಸತೊಡಗಿದ. ಗುಡುಗಿನ ಸದ್ದಿಗೆ ಅನುಸೂಯಮ್ಮನಿಗೆ ಎಚ್ಚರವಾಗಿ ಬಾಗಿಲು ತೆಗೆದುಕೊಂಡು ಜೋಪಡಿಯ ಜಗುಲಿಗೆ ಬಂದಿದ್ದಳು. ಜೋಪಡಿ ತೊಟ್ಟಿಕ್ಕುತ್ತಿತ್ತು. ಮಾವ ಜಗಲಿಯ ಮೇಲೆ ಕಾಣಲಿಲ್ಲ. ಗಾಬರಿಯಾಗಿ 'ಮಾಮ ಮಾಮ' ಎಂದು ಕೂಗಿದ್ದಳು. ಅವಳ ಕಣ್ಣು ಸುರಿಯುತ್ತಿರುವ ಮಳೆಯ ಕಡೆ ನೆಟ್ಟಿತ್ತು. ಮಿಂಚಿದಾಗ ಮಾವ ಮನೆಯ ಮುಂದಿನ ರಸ್ತೆಯ ನೀರಿನಲ್ಲಿ ಬಿದ್ದಿರುವುದು ಕಾಣಿಸಿತು. ಮಳೆಯಲ್ಲಿಯೇ ರಸ್ತೆಗೆ ನುಗ್ಗಿದ ಅನುಸೂಯಮ್ಮ ಕರಿಯನುಮಪ್ಪನ ರೆಟ್ಟೆ ಹಿಡಿದು ಎತ್ತಲು ನೋಡಿದಳು. ಮಾವನ ದೇಹದಿಂದ ಉಸಿರು ಹೊರಟು ಹೋಗಿರುವುದು ಅನುಸೂಯಮ್ಮನಿಗೆ ನಿಶ್ಚಯವಾಗಿತ್ತು. ಮಳೆಯಲ್ಲಿ ನೆನೆಯುತ್ತಲೇ ಮಾವನ ಹೆಣವನ್ನು ಎತ್ತಿಕೊಂಡು ಹೋಗಲು ಇನ್ನಿಲ್ಲದಷ್ಟು ಶ್ರಮಪಡತೊಡಗಿದಳು. ಆಕಾಶದಲ್ಲಿ ಆಗಾಗ ಮಿಂಚುತ್ತಿದ್ದ ಆ ದೃಶ್ಯ ರುದ್ರಮನೋಹರವಾಗಿ ಕಂಗೊಳಿಸುತ್ತಿತ್ತು.

## ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕಥೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.